**Order Sheet**
**In the Court Of: PRL.CIVIL JUDGE AND J.M.F.C. CHIKODI**
**AT BELGAUM**
**F.R.No: {f_r_no}**
**Case Reg.No: O.S.108.2008**

| **Plaintiff** | V E R S U S | **Defendent** |
|---|---|---|

---

| | |
|---|---|
| **1)Sushila Bapusaheb Khot @ ammannavar** | **1)Babasaheb Tatob Khot and others** |

Nature of Case: DECLARATION & INJUNCTION
ORDER 7 RULE 1 AND 2 OF CPC 151CPC
Advocate For: Plaintiff Sri/Smt: SNP
Date of Registration: 02-04-2008
Relief: Declaring that the plaintiff is owner and in joint possession of her deceased husabands share as shown in the schedule A propertes and in the alternative if it is found that plaintiffs is not in possession then plaintiff prayed for seperate partition and possession of her deceased husbands share in the suit schedule properties as descrbed in suit schedule A annexed to the plaint bymetes and bounds from concerd defendants.
Main Matter: /0000000/0000
Date of Cause of Action:

ಓ.ಎಸ್ ನಂಃ 108/2008

ಪಿ.ಡಬ್ಲೂಃ 1

<u>ದಿನಾಂಕಃ **08-11-2017** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

ಪಾಟೀ ಸವಾಲುಃ **ಶ್ರೀ. ಜೆ.ಟಿ.ಬಿ ವಕೀಲರಿಂದಃ**

ನಾನು 5 ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಹಿರೇಕೊಡಿಯಲ್ಲಿ ಮಾಡಿದ್ದೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನನಗೆ 7 ವರ್ಷ ಇದ್ದಾಗಲೇ ಮದುವೆಯಾಗಿರುತ್ತದೆ. ಸದರಿ ವಿಷಯವನ್ನು ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ನಾನು ಮದುವೆಯಾದ ನಂತರ 12 ನೇ ವಯಸ್ಸಿನವರೆಗೂ ಶಾಲೆಗೆ ಹೋಗುತ್ತಿದ್ದು 15 ವಯಸ್ಸು ತುಂಬಿದ ನಂತರ ನಾನು ನನ್ನ ಗಂಡನ ಮನೆಗೆ ಹೋಗಿರುತ್ತೇನೆ. ಮದುವೆಯಾದಾಗಿನಿಂದಲೂ ಹಿರೇಕೊಡಿಯಲ್ಲಿಯೇ ವಾಸವಾಗಿದ್ದು ಯಾವತ್ತೂ ನಿಮ್ಮ ಗಂಡನ ಮನೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಗಂಡನ ಮನೆಯಲ್ಲಿ ಒಟ್ಟು ೩೦ ವರ್ಷಗಳ ಕಾಲ ವಾಸವಿದ್ದೇನು. ಸಾಮನೆವಾಡಿಯ ನಿಮ್ಮ ಗಂಡನ ಮನೆಯಲ್ಲಿ ವಾಸವಿರುವಾಗ ಯಾವುದಾದರೂ ಪಡಿತರ ಚೀಟಿ ಮತ್ತು ಮತದಾರರ ಚೀಟಿ ಹೊಂದಿದ್ದೇರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಹೆಸರಿಗೆ ಮೊದಲಿನಿಂದಲೂ ಪಡಿತರ ಚೀಟಿ ಮತ್ತು ಮತದಾರರ ಚೀಟಿಯಲ್ಲಿ ಹಿರೇಕೊಡಿ ಊರಿನ ವಿಳಾಸಕ್ಕೆ ಸಂಭಂದಿಸಿದ್ದು ಇರುತ್ತದೆಂದರೆ ಸರಿ. ಸಾಮನೆವಾಡಿ ಹಳ್ಳಿಯಲ್ಲಿ ಇರುವಾಗ ನಿಮ್ಮ ಹೆಸರಿಗೆ ಯಾಕೆ ಪಡಿತರ ಚೀಟಿ ಮತ್ತು ಮತದಾರರ ಚೀಟಿ ಮಾಡಿಸಿಲ್ಲ ಎಂದರೆ ಸಾಕ್ಷಿಯು ನಾವು ಅಲ್ಲಿ ಒಟ್ಟು ಕುಟುಂಬದಲ್ಲಿದ್ದು ನಾನು ಆ ಬಗ್ಗೆ ವಿಚಾರ ಮಾಡಿಲ್ಲ ಎಂದು ನುಡಿಯುತ್ತಾರೆ. ಸಾಮನೆವಾಡಿ ನಿಮ್ಮ ಗಂಡನ ಮನೆಯಲ್ಲಿ ಒಟ್ಟು ೩೦-೩೫ ರಷ್ಟು ಜನ ಇರುತ್ತಾರೆಂದರೆ ಸಾಕ್ಷಿಯು ೪೦ ಜನ ಇರುತ್ತಾರೆಂದು ನುಡಿಯುತ್ತಾರೆ. ಸಾಮನೆ ವಾಡಿಯ ಮನೆಯಲ್ಲಿರುವ ಎಲ್ಲಾ ಸದಸ್ಯರ ಹೆಸರುಗಳು ಪಡಿತರ ಚೀಟಿ ಮತ್ತು ಮತದಾರರ ಯಾದಿಯಲ್ಲಿ ಇರುತ್ತದೆಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೀವು ಮೊದಲಿನಿಂದಲೂ ಹಿರೇಕೊಡಿಯಲ್ಲಿ ವಾಸವಿರುವುದರಿಂದ ಸಾಮನೆವಾಡಿಯಲ್ಲಿನ ವಿಳಾಸಕ್ಕೆ ನಿಮ್ಮ ಹೆಸರು ಮತದಾರರ ಯಾದಿ ಮತ್ತು ಪಡಿತರ ಚೀಟಿಯಲ್ಲಿ ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಮಾಡಿಸಿರುವುದಿಲ್ಲ ಹಾಗಾಗಿ ಹೆಸರು ಬಂದಿಲ್ಲ ಎಂದು ನುಡಿಯುತ್ತಾರೆ. ನೀವು ೭ ವರ್ಷ ವಯಸಾದಾಗ ಮದುವೆಯಾದ ನಂತರ ಯಾವತ್ತೂ ಸಾಮನೆವಾಡಿ ಗ್ರಾಮಕ್ಕೆ ಬಂದಿರುವುದಿಲ್ಲ ಮತ್ತು ಬಾಪುಸಾಹೇಬ್ ಎಂಬುವವರೊಂದಿಗೆ ಬಾಳ್ವೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಮಕ್ಕಳು ಇರುವುದಿಲ್ಲ. ೩೦ ವರ್ಷಗಳ ಕಾಲ ಸಾಮನೆವಾಡಿ ಗ್ರಾಮದಲ್ಲಿ ಬಾಪುಸಾಹೇಬ್ ಅವರೊಂದಿಗೆ ಬಾಳ್ವೆ ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೀಯಾ ಅಂದರೆ ಸರಿಯಲ್ಲ.

೨. ದಾವಾ ಆಸ್ತಿಗಳನ್ನು ನಾನು ನೋಡಿರುತ್ತೇನೆ. ಸಾಮನೆ ವಾಡಿಯ ನಮ್ಮ ಮನೆಯಿಂದ ೪ ದಿಕ್ಕುಗಳಲ್ಲೂ ದಾವಾ ಆಸ್ತಿಗಳು ಇರುತ್ತವೆ. ದಾವಾ ಆಸ್ತಿಗಳು ಭಾಗಾಯಿತು ಮತ್ತು ಜೀರಾಯಿತು ಇರುತ್ತವೆ. ದಾವಾ ಆಸ್ತಿಗಳಲ್ಲಿ ಯಾವು ಭಾಗಾಯಿತು ಮತ್ತು ಯಾವು ಜೀರಾಯಿತು ಇರುತ್ತವೆಂದರೆ ನಾನು ತಿಳಿದುಕೊಂಡಿರುವುದಿಲ್ಲ.

೩.ಹಿರೇಕೊಡಿ ಹಳ್ಳಿಯಲ್ಲಿ ನಿಮ್ಮ ತಂದೆ-ತಾಯಿಗೆ ಜಮೀನು ಇದೆಯೇ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಹಿರೇಕೊಡಿ ಗ್ರಾಮದಲ್ಲಿ ನಿಮ್ಮ ಹೆಸರಿಗೆ ೩ ಎಕರೆ ಜಮೀನು ದಾಖಲು ಆಗಿರುತ್ತದೆಂದರೆ ಸಾಕ್ಷಿಯು ಹೌದು ಆದರೆ ಸದರಿ ಜಮೀನಿನಲ್ಲಿ ಎಲ್ಲರಿಗೂ ಹಕ್ಕು ಇರುತ್ತದೆಂದು ನುಡಿಯುತ್ತಾರೆ. ಹಿರೇಕೊಡಿಯಲ್ಲಿ ಇರುವ ಜಮೀನಿಗೆ ೧ ಎಕರೆಗೆ ಎಷ್ಟು ಬೆಲೆ ಇದೆ ಎಂದು ನನಗೆ ಗೊತ್ತಿಲ್ಲ. ಸಾಮನೆವಾಡಿಯಲ್ಲಿರುವ ದಾವಾ ಆಸ್ತಿಗಳಲ್ಲಿ ಪ್ರತಿ ಎಕರೆಗೆ ೨೦೦೮ ರಲ್ಲಿ ರೂ. ೧ ಲಕ್ಷ ಬೆಲೆ ಇತ್ತು ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಶ್ರೀ. ಜೆ.ಟಿ.ಬಿ ವಕೀಲರು ಈಪ್ರಕರಣದಲ್ಲಿ ಮುದ್ದೆ ನಂಃ ೮ರ ಮೇಲೆ ಸುನಾವಣೆಗೆ ಇರುವುದನ್ನು ನ್ಯಾಯಾಲಯದ ಗಮನಕ್ಕೆ ತಂದಿದ್ದು ಪ್ರಕರಣವನ್ನು ಮುದ್ದೆ ನಂಃ ೮ ರ ಮೇಲೆ ಸುನಾವಣೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.

ಓ. ಹೆ. ಕೇ. ಸರಿ ಇದೆ.

2 ನೇ ಹೆಚ್ಚುವರಿ ದಿವಾಣಿ ಹಾಗೂ ಪ್ರ.ದ.ನ್ಯಾ ದಂ.ಗಳ
ನ್ಯಾಯಾಲಯ, ಚಿಕ್ಕೋಡಿ